# ಸೆವೆನ್ ಸ್ಟ್ರಾಂಗ್ ಮೆನ್ ರಾಕ್!

ರಷ್ಯಾದ ಕೋಮಿ ಗಣರಾಜ್ಯದ ಉರಲ್ ಪರ್ವತಗಳ ಉತ್ತರಕ್ಕೆ ಉತ್ತರಕ್ಕೆ ಏಳು ಅಸಹಜ ಆಕಾರದಲ್ಲಿರುವ ದೈತ್ಯಾಕಾರದ ಕಲ್ಲಿನ ಕಂಬಗಳ ಗುಂಪು ಇದೆ. ಈ ಮ್ಯಾನ್‌ಪುಪ್ಯುನರ್ ಕಲ್ಲಿನ ರಚನೆಗಳನ್ನು ಸೆವೆನ್ ಸ್ಟ್ರಾಂಗ್ ಮೆನ್ ರಾಕ್ ರಚನೆಗಳು ಹಾಗೂ ಕೋಮಿ ಗಣರಾಜ್ಯದ ಧ್ರುವಗಳು ಎಂದೂ ಕರೆಯುತ್ತಾರೆ.

ಪ್ರಸ್ಥಭೂಮಿ ಪರಿಸರಕ್ಕೆ ಸಂಪೂರ್ಣ ವಿರುದ್ಧವಾಗಿರುವ ಏಕ ಶಿಲೆಗಳು 30 ರಿಂದ 42 ಮೀಟರ್‌ನಷ್ಟು ಎತ್ತರವಾಗಿವೆ. ಸುಮಾರು 200 ವರ್ಷಗಳ ಹಿಂದೆ ಕಲ್ಲಿನ ಕಂಬಗಳ ಸ್ಥಳದಲ್ಲಿ ಎತ್ತರದ ಪರ್ವತಗಳು ಇದ್ದವು. ಮಳೆ, ಹಿಮ , ಗಾಳಿ, ಇಬ್ಬನಿ ಮತ್ತು ಶಾಖದ ಹೊಡೆತಕ್ಕೆ ಸಿಕ್ಕು ಈ ಪರ್ವತಗಳು ಸವೆದು ಹೋಗಿವೆ. ಇದರಲ್ಲಿ 34 ಮೀಟರ್ ಎತ್ತರದ ಒಂದು ಸ್ತಂಭವು ಇತರೇ ಶಿಲಾ ಕಂಬಗಳಿಗಿಂತ ಸ್ವಲ್ಪ ದೂರದಲ್ಲಿ ಇದೆ. ಇದು ತಲೆಕೆಳಗಾದ ಬಾಟಲಿಯನ್ನು ಹೋಲುತ್ತದೆ. ಸ್ಥಳೀಯವಾಗಿ ಈ ಸೆವೆನ್ ಸ್ಟ್ರಾಂಗ್ ಮೆನ್ ಕಲ್ಲು ರಚನೆಗಳು ಪೌರಾಣಿಕ ಸ್ಥಾನಮಾನಗಳನ್ನು ಹೊಂದಿವೆ. ಇಲ್ಲಿ ಜನರು ಹೇಳುವ ಪ್ರಕಾರ ಪ್ರಾಚೀನ ಕಾಲದಲ್ಲಿ ಈ ಪ್ರದೇಶದಲ್ಲಿ ಆತ್ಮಗಳು ಒಟ್ಟುಗೂಡುತ್ತಿದ್ದವಂತೆ.

ರಷ್ಯಾದ ಏಳು ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟ ಮ್ಯಾನ್‌ಪುಪ್ಯುನರ್ ಶಿಲಾರಚನೆಗಳು ರಷ್ಯಾ ದೇಶದ ಬಹಳ ಜನಪ್ರಿಯ ಆಕರ್ಷಣೆಯಾಗಿದೆ. ಅವುಗಳ ಎತ್ತರ ಮತ್ತು ಅಸಹಜ ಆಕಾರಗಳ ಕಾರಣದಿಂದಾಗಿ ದೈತ್ಯ ಕಲ್ಲು ಬಂಡೆಯ ಮೇಲ್ಭಾಗವನ್ನು ಎಂಥಾ ಅನುಭವಿ ರಾಕ್ ಕ್ಲೈಂಬರ್‌ಗಳಿಗೂ ಹತ್ತಲಾಗುವುದಿಲ್ಲ!

■ **ವಿನಯ ಕುಮಾರ್ ಬಿ.ಹೆಚ್.**



